# ಪಟ್ಟಪಾಡು ಅಷ್ಟಿಷ್ಟಲ್ಲ ಈಗವು ಲೆಕ್ಕಕ್ಕಿಲ್ಲ



**ರಿಶಾ ನಿಜಗುಣ**
**ಉದಯದ 'ಕಸ್ತೂರಿ ನಿವಾಸ' ಖುಷಿ**

◆ **ಕಥೆಯ ಅರ್ಧದಲ್ಲಿ ಪಾತ್ರ ಪರಿಚಯ ನಿರ್ವಹಣೆ ಹೇಗೆನಿಸುತ್ತದೆ?**

'ಕಸ್ತೂರಿ ನಿವಾಸ' ಅಂದ ತಕ್ಷಣ ಕಣ್ಣೆದುರು ಕಾಣುವ ಚಿತ್ರ ರಾಜ್‌ಕುಮಾರ್. ಅದೇ ಹೆಸರಿನ ಧಾರಾವಾಹಿ ಆರಂಭವಾಗಿ ವರ್ಷಗಳೇ ಕಳೆದಿವೆ. ಅದರಲ್ಲಿ ಈಗಷ್ಟೇ ನನ್ನ ಪಾತ್ರ ಪರಿಚಯ ಆಗಿದೆ. ಸದ್ಯ ಕಥಾನಾಯಕ ರಾಘವ ಅವರ ಕುಟುಂಬಕ್ಕೂ ಮತ್ತು ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ. ಕಥೆಯ ಹರವು ಭಿನ್ನ ರೂಪ ಪಡೆದಿದೆ. ಮುಂದೆ ಏನಾಗುತ್ತದೆಯೋ ಗೊತ್ತಿಲ್ಲ. ಸದ್ಯ ರಾಘವ ಆಸ್ಪತ್ರೆಗೆ ಸೇರಿದ್ದಾರೆ. ಅವರು ಇನ್ನೂ ಖಿನ್ನತೆಯಿಂದ ಹೊರ ಬಂದಿಲ್ಲ. ಹೀಗೇಕೆ ಆಗಿದ್ದಾರೆ ಎಂದು ತಿಳಿದುಕೊಳ್ಳುವ ಕುತೂಹಲ ನನಗಿದೆ. ಮುಂದೆ ನಮ್ಮಿಮ್ಮಿಬ್ಬರಲ್ಲಿ ಸ್ನೇಹ ಬೆಳೆದು ಭಿನ್ನ ತಿರುವು ಪಡೆಯಬಹುದು ಎಂದು ನಾನು ಅಂದುಕೊಂಡಿದ್ದೇನೆ.

◆ **ನಟನೆಗೆ ಅವಕಾಶ ಪಡೆಯಲು ಪಟ್ಟ ಪಾಡು ಹೇಗಿತ್ತು?**

ನಮ್ಮ ಊರು ಹೊಸದುರ್ಗ. ನನಗೆ ಪದವಿ ಮುಗಿಸಿದ ತಕ್ಷಣ ಎಂಬಿಎ ಮಾಡಬೇಕು ಎನ್ನುವ ಆಸೆ ಇತ್ತು. ಅಷ್ಟರಲ್ಲಿ ಸೀರಿಯಲ್‌ನಲ್ಲಿ ನಟಿಸುವ ಬಗ್ಗೆ ವಿಚಾರ ಬಂತು. ನನ್ನ ತಮ್ಮ ಅರುಣ್ ಅದಕ್ಕೆ ಹುರಿದುಂಬಿಸಿದ. ನಮ್ಮ ತಂದೆ– ತಾಯಿ ಕೂಡ ಸಹಮತವನ್ನು ಸೂಚಿಸಿದರು. ನಮ್ಮ ಮನೆಯನ್ನು ಬೆಂಗಳೂರಿಗೆ ಸ್ಥಳಾಂತರಿಸಿದೆವು. ಆರಂಭದಲ್ಲಿ ರಂಗಚಟುವಟಿಕೆಯಲ್ಲಿ ತೊಡಗಿದೆ. ನಾಲ್ಕಾರು ಪ್ರದರ್ಶನಗಳ ನಂತರ ಸೀರಿಯಲ್‌ಗಳಿಗೆ ಆಡಿಷನ್ ನೀಡಲು ಆರಂಭಿಸಿದೆ. ಆಡಿಷನ್‌ಗಳ ಸರಣಿಯನ್ನೇ ನೀಡಿದ್ದೇನೆ. ಪ್ರತಿ ಸಂದರ್ಭದಲ್ಲೂ ನನ್ನ ತಮ್ಮ ಜೊತೆಗೆ ಬರ್ತಾ ಇದ್ದ. ಮೊದಮೊದಲು ತುಂಬ ಕಷ್ಟ ಆಯ್ತು. ವಂಚನೆ ಮಾಡುವವರು ಗೋಚರಿಸಿದರು. ದುರುದ್ದೇಶದ ದೃಷ್ಟಿಯ ನೋಟ ಬೀರುವವರು. ಸುಳ್ಳು ಸುಳ್ಳೇ ಪಾತ್ರ ಕೊಡುವ ಭರವಸೆ ನೀಡುವವರು. ಪ್ರಧಾನ ಪಾತ್ರ ಎಂದು ಹೇಳಿ ಚಿಕ್ಕ ಪುಟ್ಟ ಪಾತ್ರ ನೀಡಲು ಬಂದವರನ್ನು ಕಂಡೆ. ಪ್ರಧಾನ ಪಾತ್ರವನ್ನೇ ಮಾಡಬೇಕು ಎನ್ನುವ ಸಂಕಲ್ಪದಿಂದ ನಿರಂತರ ಹುಡುಕಾಡುತ್ತಲೇ ಇದ್ದೆ. ಹಣಕಾಸಿನ ಸಮಸ್ಯೆಯಿಂದ ಹಿಡಿದು ಹಲವು ರೀತಿಯ ತೊಂದರೆಗಳನ್ನು ಎದುರಿಸಿದ್ದೇನೆ. ಒಂದಾದ ಮೇಲೆ ಒಂದು ಆಡಿಷನ್ ನೀಡಿದ್ದು ಬಿಟ್ಟರೆ ಅವಕಾಶ ಸಿಗಲೇ ಇಲ್ಲ. ಆಗ ಸೂಕ್ಷ್ಮ ಮತ್ತು ಮೃದುಸ್ವಭಾವದವಳಾದ ನಾನು ಎದೆಗುಂದಿದ್ದೆ. ನನ್ನ ತಮ್ಮ ಮಾತ್ರ ಧೈರ್ಯವನ್ನು ತುಂಬಿ ಇಲ್ಲಿ ನೆಲೆ ನಿಲ್ಲಲು ಪ್ರೇರಕ ಶಕ್ತಿ ಆದ. 'ವರಲಕ್ಷ್ಮಿ ಸ್ಟೋರ್ಸ್'ಗೆ ಕೂಡ ಆಗುವುದಿಲ್ಲ ಎನ್ನುವ ಸಂಶಯದಲ್ಲೇ ಆಡಿಷನ್ ನೀಡಿದ್ದೆ. ಅದೃಷ್ಟಕ್ಕೆ ಅವಕಾಶ ಸಿಕ್ಕಿತು, ಭರವಸೆಯೂ ಮೂಡಿತು. ಈಗ ಅಂತಹ ಕಷ್ಟಗಳು ಇಲ್ಲ, ಪಟ್ಟಪಾಡಿನ ನೆನಪೂ ಆಗಲ್ಲ. ಆ ಕಷ್ಟಗಳನ್ನು ದಾಟಿದ್ದರಿಂದಲೇ ಇವತ್ತು ಇಲ್ಲಿ ಇದ್ದೇನೆ ಎಂದು ಭಾವಿಸಿದ್ದೇನೆ.

◆ **ನಟನೆಯ ಕನಸು ಹೊತ್ತವರು ಅವಕಾಶಕ್ಕೆ ಏನು ಮಾಡಬೇಕು?**

ನಮ್ಮ ಉದ್ದೇಶ ಏನಿದೆಯೋ ಅದಕ್ಕೆ ಮೊದಲು ಬದ್ಧರಾಗಬೇಕು. ಕಷ್ಟ– ಸುಖವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಮುನ್ನುಗ್ಗುವ ಮನೋಭಾವ ಬೆಳೆಸಿಕೊಳ್ಳಬೇಕು. ನಟನೆ ಎನ್ನುವುದು ಬೇರೆ ಕೆಲಸದಂತೆ ಅಲ್ಲ. ಇಲ್ಲಿ ಒಂದು ತಂಡದ ಕ್ರಿಯಾಶೀಲ ಚಟುವಟಿಕೆ ಇರುತ್ತದೆ. ಬೇರೆ ಬೇರೆ ಕೆಲಸಗಳಂತೆ ಇಲ್ಲಿಯೂ ಅನೇಕ ನ್ಯೂನ್ಯತೆಗಳು ತೊಂದರೆಗಳೂ ಇರುತ್ತವೆ. ಅವೆಲ್ಲವನ್ನೂ ದೊಡ್ಡ ಅಡ್ಡಿ ಎಂದುಕೊಳ್ಳದೆ ಎದುರಿಸುತ್ತೇನೆ ಎಂದುಕೊಳ್ಳಬೇಕು. ಏನೋ ಒಂದು ಮಾಡಿ ಜೀವನ ಮಾಡಿಕೊಂಡಿರುತ್ತೇನೆ ಎನ್ನುವುದಾದರೆ ಕಲಾವಿದರಾಗುವ ಕನಸು ಕಾಣಬಾರದು. ನಟನೆಯನ್ನೇ ವೃತ್ತಿಯಾಗಿ ತೆಗೆದುಕೊಳ್ಳುತ್ತೇನೆ ಎಂದು ಶ್ರದ್ಧೆಯಿಂದ ಕೆಲಸ ಮಾಡುತ್ತಾ ಬಂದರೆ ಖಂಡಿತ ಅವಕಾಶಗಳು ಸಿಕ್ಕೇ ಸಿಗುತ್ತವೆ.

◆ **ಮುಂದಿನ ಕನಸುಗಳ ಬಗ್ಗೆ ಹೇಳಿ...**

ಒಳ್ಳೆಯ ನಟಿ ಆಗಬೇಕು ಎನ್ನುವುದು ಆಸೆ. ನಟನೆಗೆ ಸಂಬಂಧಿಸಿದಂತೆ ಯಾರೂ ತಪ್ಪನ್ನು ಹುಡುಕದಂತೆ ಮಾಡಬೇಕು. ಒಳ್ಳೆಯ ಪಾತ್ರಗಳಿಗೆ ಜೀವ ತುಂಬಬೇಕು. ಅನೇಕ ಪ್ರಖ್ಯಾತರ ಜೊತೆ ಕೆಲಸ ಮಾಡಬೇಕು. ಎಲ್ಲರಿಂದಲೂ ಕಲಿಯುವುದು ಇರುತ್ತದೆ. ನಟನೆ ಎಂದರೆ ಏನೆಂಬ ಮೂಲ ತತ್ವವೇ ನನಗೆ ಗೊತ್ತಿರಲಿಲ್ಲ. ರಂಗಭೂಮಿಯಲ್ಲಿ ಸ್ವಲ್ಪ ಕಲಿತೆ. ಆಡಿಷನ್ ನೀಡುವುದರಲ್ಲೇ ಹೆಚ್ಚು ಕಲಿತು ಈಗ ಒಂದು ನೆಲೆಯನ್ನು ಗುರುತಿಸಿಕೊಂಡಿದ್ದೇನೆ. ಈಗ ಕಲಿಕೆ ಹೆಚ್ಚಾಗಿದೆ. ಕಲಿಯುತ್ತಾ ಬೆಳೆಯಬೇಕು. ಸಿನಿಮಾದಲ್ಲಿ ಮಾಡಬೇಕು ಎಂದುಕೊಂಡಿದ್ದೇನೆ.

◆ **ಹೊರಾಂಗಣ ಚಿತ್ರೀಕರಣ ಇಷ್ಟವೋ ಒಳಾಂಗಣ ಚಿತ್ರೀಕರಣ ಇಷ್ಟವೋ...**

ಎರಡೂ ಇಷ್ಟ ಆಗುತ್ತವೆ. ಅವುಗಳ ಸ್ವರೂಪ ನೋಡುವುದಾದರೆ, ಹೊರಾಂಗಣ ಸ್ವಲ್ಪ ಕಷ್ಟ ಇರುತ್ತದೆ. ಸಮಯ ಹೆಚ್ಚು ತೆಗೆದುಕೊಳ್ಳುತ್ತದೆ. ಒಳಾಂಗಣ ಆದರೆ ಬೆಂಗಳೂರಿನಲ್ಲಿಯೇ ಇರುತ್ತದೆ. ಬಹುತೇಕ ಸೆಟ್ ರೆಡಿ ಇರುತ್ತದೆ. ಕೆಲಸವನ್ನು ಬೇಗ ಮಾಡಬಹುದು. ಜೊತೆಗೆ ಕುಟುಂಬದವರ ಜೊತೆ ಇರುತ್ತೇವೆ. ಹೊರಗಡೆ ಹೋದರೆ ಮನೆಯನ್ನು ಮಿಸ್ ಮಾಡಿಕೊಳ್ಳುತ್ತಿದ್ದೇವೆ ಎಂದು ಅನಿಸುತ್ತದೆ. ಕೆಲಸದ ಒತ್ತಡವನ್ನೂ ಹೊರಾಂಗಣ ಚಿತ್ರೀಕರಣ ಉಂಟುಮಾಡುತ್ತದೆ. ಆದರೆ ಏಕಾತನೆಯನ್ನು ಮುರಿಯಲು ಇವು ಒಂದಕ್ಕೊಂದು ಪೂರಕವಾಗುವಂತೆ ಇದ್ದರೆ ಚೆಂದ.

◆ **ಪಾತ್ರದ ಆಯ್ಕೆ ಹೇಗೆ ಮಾಡುತ್ತೀರಿ?**

ಕಥೆ ಇಷ್ಟ ಆಗಬೇಕು. ಕಥೆಯಲ್ಲಿ ನನ್ನ ಪಾತ್ರಕ್ಕೆ ನೀಡುರುವ ಪ್ರಾಮುಖ್ಯತೆ ಮುಖ್ಯ ಆಗುತ್ತದೆ. ಪಾತ್ರದ ಗಾತ್ರಕ್ಕಿಂತ ಅದರ ಮಹತ್ವ ಹೆಚ್ಚು ಮುಖ್ಯ. ಆದಕ್ಕೆ ತೂಕ ಇದೆಯಾ ನಾನು ಮಾಡಬಹುದಾ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಂಡು ಒಪ್ಪುತ್ತೇನೆ. ಈಗ ನನಗೂ ಒಂದು ಮನ್ನಣೆ ಸಿಕ್ಕಿದೆ. ಅದನ್ನು ವೃದ್ಧಿಸಿಕೊಳ್ಳುವಂತೆ ಇರಬೇಕು.

■ **ರಾಘವೇಂದ್ರ ಕೆ.**